# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.2273/2017
ಸಿಡಬ್ಲ್ಯೂ.4 ಪಿಡಬ್ಲ್ಯೂ.1

| | | |
|---|---|---|
| ಸಾಕ್ಷಿಯ ಹೆಸರು | - | ಬಿ ಎಸ್ ಬಾವನ್ನವರ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಅಬಕಾರಿ ಮುಖ್ಯ ಪೇದೆ |
| ವಾಸ | - | ಗೋಕಾಕ |

ದಿನಾಂಕಃ 02-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

2014 ರಿಂದ 2023 ರವರೆಗೆ ಗೋಕಾಕ ಅಬಕಾರಿ ವಲಯ ಕಛೇರಿಯಲ್ಲಿ ಅಬಕಾರಿ ಪೇದೆ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 03-01-2017 ರಂದು ಅಬಕಾರಿ ನಿರೀಕ್ಷಕರ ಕಛೇರಿ ಗೋಕಾಕ ವಲಯ ಗೋಕಾಕ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ನಮ್ಮ ಮೇಲಾಧಿಕಾರಿಯಾದ ಚಾಸಾ-1 ರವರು ನನ್ನನ್ನು ಕರೆದು ಗೋಕಾಕ ತಾಲೂಕಿನ ಗುಜನಾಳ ಗ್ರಾಮದ ಅರಣ್ಯ ಪ್ರದೇಶದಲ್ಲಿ ಕಳ್ಳ ಬಟ್ಟಿ ಸಾರಾಯಿ ಮಾರಾಟವಾಗುತ್ತಿದೆ ಎಂದು ಬಾತ್ಮಿ ಬಂದಿದೆ ಆದಕಾರಣ ತಮ್ಮ ಜೊತೆ ಬರಲು ಹೇಳಿದ್ದು ಸದರಿ ಅವರ ಆದೇಶದ ಮೇರೆಗೆ ಚಾಸಾ-1 ರವರ ಜೊತೆ ಕೂಡಿಕೊಂಡು ನಮ್ಮ ಕಛೇರಿಯಿಂದ ಖಾಸಗಿ ವಾಹನದಲ್ಲಿ ಸಾಯಂಕಾಲ 7 ಗಂಟೆಗೆ ಕಛೇರಿಯಿಂದ ಹೊರಟು ಸಾಯಂಕಾಲ 7-45 ಗಂಟೆಗೆ ಅಂಕಲಗಿ ಗ್ರಾಮಕ್ಕೆ ಬಂದೆವು. ಅಂಕಲಗಿ ಗ್ರಾಮಕ್ಕೆ ಬಂದು ವಾಹನವನ್ನು ನಿಲ್ಲಿಸಿ ಚಾಸಾ-1 ರವರ ಆದೇಶದ ಮೇರೆಗೆ ಅಲ್ಲೆ ನಿಂತ ಇಬ್ಬರು ಸಾರ್ವಜನಿಕರನ್ನು ಪಂಚರಾಗಲು ವಿನಂತಿಸಿಕೊಂಡೇವು ಅದರಲ್ಲಿ ಒಬ್ಬರು ಮಾತ್ರ ನಮ್ಮ ಮನವಿಗೆ ಸ್ವಂದಿಸಿ ನಮ್ಮ ಜೊತೆ ಬರಲು ಒಪ್ಪಿಕೊಂಡರು. ಅವರನ್ನು ಕರೆದುಕೊಂಡು ಅಲ್ಲಿಂದ ಹೊರಟು ಗುಜನಾಳ ಗ್ರಾಮದ ಹಿಂಬಾಗದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದೇವು. ಚಾಸಾ-1 ರವರು ಶೋದನಾ ಸಮುಚ್ಚಿತ ವರದಿಯನ್ನು ತಯಾರಿಸಿಕೊಂಡರು. ನಂತರ ಪಂಚರು ಒಬ್ಬರೇ ಇದ್ದಕಾರಣ ನಮ್ಮ ಸಹ ಸಿಬ್ಬಂದಿ ಆದ ಚಾಸಾ-3 ರವರನ್ನು ಪಂಚರಾಗಿ ಚಾಸಾ-1 ರವರು ನೇಮಿಸಿದರು. ಅಲ್ಲಿಂದ 2 ತಂಡಗಳಾಗಿ ಗುಜನಾಳ ಗ್ರಾಮದ ಹಿಂಬಾಗದ ಅರಣ್ಯ ಪ್ರದೇಶದಲ್ಲಿ ಕಾಲು ನಡುಗೆಯಲ್ಲೆ ಹೊರಟೇವು. ಸ್ವಲ್ಪ ದೂರ ಹೋದ ನಂತರ ಒಬ್ಬ ದೂರದಲ್ಲಿ ಕುಳಿತ ವ್ಯಕ್ತಿಯು ನಮ್ಮನ್ನು ನೊಡಿ ಓಡಲು ಪ್ರಯತ್ನಿಸಿದನು ಆಗ ನಾವು ಅವನನ್ನು ಹಿಡಿಯಲು ಪ್ರಯತ್ನಿಸಿದೇವು ಕತ್ತಲು ಇದ್ದ ಕಾರಣ ವ್ಯಕ್ತಿಯು ಅರಣ್ಯದಲ್ಲಿ ನಮ್ಮ ಕೈಯಿಗೆ ಸಿಗಲಿಲ್ಲ. ನಂತರ ವ್ಯಕ್ತಿಯು ಕುಳಿತಿದ್ದ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ಒಂದು ಚೀಲ ಕಂಡು ಬಂತು ಆ ಚೀಲವನ್ನು ಪಂಚರ ಸುಮಕ್ಷಮ ತೆರೆದು ನೋಡಿದಾಗ ಒಂದು ಕಪ್ಪು ಬಣ್ಣದ ರಬ್ಬರ ಟ್ಯೂಬನಲ್ಲಿ ಸುಮಾರು 20 ಲೀಟರದಷ್ಟು ಕಳ್ಳ ಬಟ್ಟಿ ಸಾರಾಯಿ ಇರುವುದು ಕಂಡು ಬಂದಿತು ಆಗ ಚಾಸಾ-1 ರವರು ಅಲ್ಲೆ ನಿಂತಿದ್ದ ಇಬರು ವ್ಯಕ್ತಿಗಳನ್ನು ವಿಚಾರಿಸಿ ಓಡಿ ಹೊದ ವ್ಯಕ್ತಿ ಯಾರು ಎಂದು ಕೇಳಲಾಗಿ ಅದರಲ್ಲಿ ಒಬ್ಬ ಅವನ ಹೆಸರು ಬಸವಣ್ಣಿ ಭಿಮಪ್ಪಾ ನಾಯಿಕ ಉರ್ಫ ಬಿಜನಾಯಿಕ ಸಾಃ ರಾಜಕಟ್ಟಿ ತಾಃ ಹುಕ್ಕೇರಿ ಎಂದು ತಿಳಿಸಿದನು. ನಾವು ಕೆಳಗೆ ಬಂದು ಚಾಸಾ-1 ರವರು ಊರ ಜನರನ್ನು ವಿಚಾರಿಸಿದಾಗ ಬಿಜನಾಯಿಕ ಎಂಬ ವ್ಯಕ್ತಿ ದಿನಾಲೂ ಬಂದು ಇಲ್ಲಿ ಕಳ್ಳ ಬಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿದರು

ಸಿ.ಸಿ. ನಂ.2273/2017

ಸಿಡಬ್ಲ್ಯೂ.4 ಪಿಡಬ್ಲ್ಯೂ1

ಆಗ ಚಾಸಾ-1ರವರು ಅವನನ್ನು ಬಂಧಿಸಬೇಕೆಂದು ತಿಳಿಸಿ ಸಿಕ್ಕಿರುವಂತ ಕಳ್ಳಬಟ್ಟಿ ಸಾರಾಯಿಂದ ಒಂದು 180 ML ಪ್ಲಾಸ್ಟಿಕ ಬಾಟಲನಲ್ಲಿ ರಾಸಾಯನಿಕ ಪರೀಕ್ಷೆಗೂಸ್ಕರ ಸಾಂಪಲ ತೆಗೆದು ಅದಕ್ಕೆ ಅರಿವೆ ಕಟ್ಟಿ ದಾರದಿಂದ ಸುತ್ತಿ ಅರಗು ಹಾಕಿ ಕಛೇರಿ ಸೀಲಿನಿಂದ ಸೀಲ ಮಾಡಲಾಯಿತು. ಅದಕ್ಕೆ ಚಾಸಾ-1ರವರು ಹಾಗೂ ಪಂಚರ ಸಹಿವುಳ್ಳ ಚಿಟಿಗಳನ್ನು ಅಂಟಿಸಲಾಯಿತು. ಸದರಿ ಕೃತ್ಯಕ್ಕೆ ಸಂಬಂದಪಟ್ಟ ಪಚನಾಮೆಯನ್ನು ಕೃತ್ಯ ನಡೆದ ಸ್ಥಳದಲ್ಲಿ ಕುಳಿತು ಬ್ಯಾಟರಿ ಸಹಾಯದಿಂದ ರಾತ್ರಿ 8 ಗಂಟೆ 40 PM ನಿಂದ 9 ಗಂಟೆ 30 ರವರೆಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು ನಂತರ ಸಿಕ್ಕ ಮುದ್ದೆಮಾಲನೊಂದಿಗೆ ನಾವು ಮತ್ತು ಚಾಸಾ-1ರವರು ಅಲ್ಲಿಂದ ಕಛೇರಿಗೆ ಮರಳಿದೇವು. ಈ ಗುನ್ನೆಗೆ ಸಂಬಂದಪಟ್ಟಂತೆ ಚಾಸಾ-6ರವರು ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ ಆರೋಪಿಯಾಗಿರುತ್ತಾನೆ. ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೆನೆ ಮಾದರಿ ತೆಗೆದ 180 MLದ ಒಂದು ಪ್ಲಾಸ್ಟೀಕ ಬಾಟಲಿಯನ್ನು ಎಂ.ಓ-1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಘಟನೆ ನಡೆದ ದಿನ ನಾನು ಮತ್ತು ಚಾಸಾ-3 ರವರು ಕಛೇರಿಯ ಕರ್ತವ್ಯ ನಿಮಿತ್ತ ಹಾಜರಿದ್ದೇವು. ಬಾತ್ಮಿ ಬಂದ ನಂತರ ಚಾಸಾ-1ರವರು ನಮ್ಮ ಜೊತೆ ಚರ್ಚೆ ಮಡಲು 5 ನೀಮಿಶ ಬೇಕಾಯಿತು. ನಮ್ಮ ಕಚೇರಿಯಿಂದ ಅಂಕಲಗಿ 30 ಕಿಲೊ ಮೀಟರ ಆಗುತ್ತದೆ ಅಲ್ಲಿಗೆ ಹೋಗಲು 40 ನೀಮಿಶ ಬೇಕಾಗುತ್ತದೆ. ನಾವು ಅಂಕಲಗಿಗೆ ಕಡಬಗಟ್ಟಿ ಮಾರ್ಗವಾಗಿ ಹೊಗಿರುತ್ತೇವೆ. ನಾವು ಯಾವ ಮಾರ್ಗವಾಗಿ ಹೂದೇವು ಎಂದು ಹೇಳಿಕೆಯಲ್ಲಿ ಬರಿಸಿರುವುದಿಲ್ಲ. ನಾವು ಹೋದ ಖಾಸಗಿ ವಾಹನ ಟ್ರಾಕ್ಸ ಆಗಿತ್ತು, ಸದರಿ ವಾಹನದ ನಂಬರ ಮತ್ತು ಅದರ ಚಾಲಕನ ಹೆಸರು ನೆನಪಿರುವುದಿಲ್ಲ. ಅಂಕಲಗಿಯಿಂದ ಗುಜನಾಳ 4 ಕೀಮಿ ಇದೆ. ಅಲ್ಲಿ ಹೊಗಲು 10 ರಿಂದ 15 ನಿಮೀಶ ಬೇಕು. ಗುಜನಾಳಗೆ ಹೋದಾಗ 8 ಗಂಟೆ ಆಗಿತ್ತು. ಶೋದನಾ ಸಮುಚಿತ ವಾರಂಟನ್ನು ತಯಾರು ಮಾಡಲು 5 ರಿಂದ 10 ನಿಮೀಶ ಬೇಕಾಯಿತು.

ಗುಡ್ಡಗಾಡ ಪ್ರದೇಶದಲ್ಲಿ ಸಾಮನ್ಯವಾಗಿ ಕಲ್ಲು ,ಮುಳ್ಳು, ಕಂಟಿ ಇರುತ್ತವೆ ಎಂದರೆ ಸರಿ. ನಾವು ಘಟನಾ ಸ್ಥಳಕ್ಕೆ ಯಾವ ದಿಕ್ಕಿನಿಂದ ಹೊದೇವು ಗೊತ್ತಿಲ್ಲ, ನಾವು ಕಾಲು ದಾರಿಯಲ್ಲಿ ಸುಮಾರು ½ ಕಿಮಿ ಹೋಗಿರುತ್ತೇವೆ. ಗುಡ್ಡಗಾಡದ ಪ್ರದೇಶದಲ್ಲಿ ಸುಮಾರು 2-3 ಜನ ಇದ್ದರು. ಅಲ್ಲಿ ಲೈಟ ಬೆಳಕು ಇರಲಿಲ್ಲ ಎಂದರೆ ಸರಿ. ನಮ್ಮನ್ನೂ ನೋಡಿ ಆರೋಪಿ ಯಾವ ದಿಕ್ಕಿಗೆ ಓಡಿ ಹೊದನು ಗೋತ್ತಿಲ್ಲ. ಆರೋಪಿ ಹತ್ತಿರ ಇದ್ದ ಚೀಲವು ಕಾಳು ತುಂಬುವ ಗೋಣಿ ಚೀಲ ಆಗಿತ್ತು. ಆರೋಪಿ ಬಳಿ ದೊರೆತ 20 ಲೀಟರ ಟ್ಯೂಬಿನ ಅದಾರದ ಮೇಲೆ ಕಳ್ಳಬಟ್ಟಿ ಸರಾಯಿ 20 ಲೀಟರ ಎಂದು ಅಂದಾಜೀಸಲಾಯಿತು. ನಾವು ದಾಳಿ ಮಾಡಿದಾಗ 8 ಗಂಟೆ 30 ನೀಮಿಶ ಆಗಿತ್ತು. ನಾವು ಘಟನಾ ಸ್ಥಳದಿಂದ ಮರಳಿ ನಮ್ಮ ಗಾಡಿ ಹತ್ತಿರ ಬರಲು 4 ನಿಮಿಶ ಬೇಕಾಯಿತು. ಆರೋಪಿ ವಿವರ ನೀಡಿದ ಸಾರ್ವಜನಿಕರ ಹೇಳಿಕೆ ಪಡೇದಿರುವುದಿಲ್ಲ, ಸಾಕ್ಷಿ ಮುಂದುವರೆದು ಸದರಿ ಸಾರ್ವನಿಕರು ಮೌಖಿಕವಾಗಿ ಆರೋಪಿ ವಿವರ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ.

ಸೀಲ ಮಾಡಿ ಪಂಚರ ಸಹಿ ತೆಗೆದುಕೊಳ್ಳಲು 5 ನೀಮಿಶ ಬೇಕಾಯಿತು. ಪಂಚನಾಮೆಯನ್ನು ಚಾಸಾ-1 ರವರು ಪಂಚರ ಹೇಳಿಕ ಮೇರೆಗೆ ಬರೆದು ಮುಗಿಸಲು ಸುಮಾರು 45 ನೀಮಿಶ ಬೇಕಾಯಿತು. ಆರೋಪಿ ಊರು ರಾಜಕಟ್ಟಿ ಎಂದರೆ ಸರಿ. ಆರೋಪಿ ಗ್ರಾಮ ಪಂಚಾಯತಿ ಸದಸ್ಯ ಎಂದರೆ ಗೊತ್ತಿಲ್ಲ. ಆರೋಪಿಗೆ ರಾಜಕೀಯ ವೈರಿಗಳು ಇದ್ದಾರೆ ಎಂದರೆ ಗೊತ್ತಿಲ್ಲ.ಇಗ ಆರೋಪಿಯು ರಾಜಕಟ್ಟಿ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯ ಇದ್ದಾರೆ ಎಂದರೆ ಗೊತ್ತಿಲ್ಲ. ರಾಜಕಟ್ಟಿ ಗ್ರಾಮ ಪಂಚಾಯತಿ ಅಧ್ಯಕ್ಷರು ಆರೋಪಿ ಮೇಲಿನ ಸಿಟ್ಟಿನಿಂದ ಚಾಸಾ-1 ರವರಿಗೆ ಆರೋಪಿ ಮೇಲೆ ಕೇಸು ಮಾಡಲು ಹೇಳಿದ್ದರು ಎಂದರೆ ಸರಿಯಲ್ಲ. ಆದ್ದರಿಂದ್ದ ಚಾಸಾ-1 ರವರು ಸುಳ್ಳು ಫಿರ್ಯಾದಿ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಗಸ್ತು ಕಾರ್ಯ ಮಾಡುವಾಗ ದೊರೆತ ಮಾಲುಗಳನ್ನು ಈ ಪ್ರಕರಣದಲಿ ಅಳವಡಿಸಿಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಕಚೇರಿಯಲ್ಲಿ ಪಂಚಾನಾಮೆ ತಯಾರಿಸಿ ಪಂಚರ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಾನು ಚಾಸಾ-6 ರವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲನ್ನು ಕಚೇರಿಯಲ್ಲಿ ಉಳಿದ ವಿಲೇವಾರಿ ಆಗದ ಮಾಲಿನಿಂದ ಹಾಜರು ಪಡಿಸಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಮಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.1738/2016
ಸಿಡಬ್ಲ್ಯೂ.4 ಪಿಡಬ್ಲ್ಯೂ.3

ಸಾಕ್ಷಿಯ ಹೆಸರು - ಮಹಾದೇವ ಗಂಗಪ್ಪ ಗುಡ್ಡದ

ವಯಸ್ಸು - 55 ವರ್ಷ

ಉದ್ಯೋಗ - ಅಬಕಾರಿ ಪೇದೆ

ವಾಸ - ಗೋಕಾಕ

ದಿನಾಂಕಃ 14-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಪ್ರಭಾರ ಸ.ಸ.ಅ.ರವರಿಂದಃ</u>

2013 ರಿಂದ ಇಲ್ಲಿಯವರೆಗೆ ಗೋಕಾಕ ಅಬಕಾರಿ ಪೊಲೀಸ ಠಾಣೆಯಲ್ಲಿ ಅಬಕಾರಿ ಪೇದೆಯಾಗಿ ಕೆಲಸ ಮಾಡುತ್ತಿದ್ದೆನೆ.

ದಿಃ 3-2-2016 ರಂದು ನಾನು ಕಚೇರಿಯಲ್ಲಿದ್ದಾಗ ಚಾಸಾ-1 ರವರು ದಾಳಿ ಮಾಡುವ ವಿಷಯ ಹೇಳಿದರು. ನಂತರ ಸರ್ಕಾರಿ ವಾಹನ ಕೆಎ 22 ಜಿ 454 ರಲ್ಲಿ ಚಾಸಾ-1 ಹಾಗು ನಾನು ಕೂಡಿಕೊಂಡು ಮಾಲದಿನ್ನಿ ಕ್ರಾಸಗೆ ಹೋದೆವು. ತಾಲೂಕು ಪಂಚಾಯತ ಹಾಗು ಜಿಲ್ಲಾ ಪಂಚಾಯತ ಚುನಾವಣೆಯ ನಿಮತ್ಯವಾಗಿ ಗಸ್ತು ನಡೆಸುತ್ತಿದ್ದಾಗ ಬೆಣಚಿನಮರಡಿಯಿಂದ ಚಾಸಾ-1 ರವರಿಗೆ ಮಾಹಿತಿ ಬಂದಿದ್ದು ಅವರೊಂದಿಗೆ ನನ್ನನ್ನು ಕರೆದುಕೊಂಡು ಹೋದರು. ನಂತರ ಬಸ್ಟ್ಯಾಂಡ ಹತ್ತಿರ ಇಬ್ಬರು ಪಂಚರನ್ನು ಕರೆದುಕೊಂಡು ಒಂದು ಕಿರಾಣಿ ಅಂಗಡಿಗೆ ಹೋದೆವು. ಅಲ್ಲಿ ತಪಾಸನೆ ಮಾಡಲಾಗಿ ಅಂಗಡಿಯ ಎಡಬದಿಯ ಮೂಲೆಯಲ್ಲಿ ಅನುಮಾನಸ್ಪದವಾಗಿ 1 ರಟ್ಟಿನ ಪೆಟ್ಟಿಗೆಯನ್ನು ಕಂಡು ಪಂಚರ ಸಮಕ್ಷಮದಲ್ಲಿ ಸದರಿ ಪೆಟ್ಟಿಗೆಯನ್ನು ತೆರೆದು ನೋಡಲಾಗಿ ಪೆಟ್ಟಿಗೆಯಲ್ಲಿ 180 ಎಂಎಲನ 48 ಓರಿಜನಲ್ ಚಾಯ್ಸು ವಿಸ್ಕಿಯ ರಟ್ಟಿನ ಪೆಟ್ಟಿಗೆಗಳು ಕಂಡುಬಂದವು. ಪಂಚರ ಸಮಕ್ಷಮ ಸದರಿ ಮುದ್ದೆಮಾಲನ್ನು ಎತಕ್ಕೆ ಇಟ್ಟುಕೊಂಡಿಯಾ ಎಂದು ಕೇಳಲಾಗಿ ಆತನು ಕಸಿವಿಸಿಗೊಂಡನು. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಪ್ರಕಾರ ಇದು ಅಪರಾಧ ಎಂದು ಹೇಳಲಾಗಿ ಸದರಿ ಮುದ್ದೆಮಾಲಿನಿಂದ 1x 180 ಎಂಎಲನ ರಟ್ಟಿನ ಪೆಟ್ಟಿಗೆಯನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಒಂದು ಬಟ್ಟೆಯಿಂದ ಕಟ್ಟಿ ಅರಗಿನ ಶೀಲು ಮಾಡಿ ಅವುಗಳಿಗೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿದೆವು. ನಂತರ ಪಂಚರ ಅಧಿಕಾರಿಗಳ ಸಹಿ ಮಾಡಿಸಿ ಮುದ್ದೆಮಾಲಿಗೆ ಅಂಟಿಸಲಾಯಿತು. ಪಂಚನಾಮೆಯನ್ನು ಸ್ಥಳದಲ್ಲಿಯೇ ಕಿರಾಣಿ ಅಂಗಡಿಯ ಲೈಟಿನ ಬೆಳಕಿನಲ್ಲಿ 8-15 ರಿಂದ 9-15 ರವರೆಗೆ ಮಾಡಿ ಮುಗಿಸಲಾಯಿತು. ಮಾದರಿ ಸೀಲನ್ನು ತಯಾರಿಸಿಕೊಂಡು ಅಲ್ಲೆ ಪಂಚರ ಸಮಕ್ಷಮ ಮುದ್ದೆಮಾಲನ್ನು ಹಾಗೂ ಆರೋಪಿಯನ್ನು ವಶಕ್ಕೆ ಪಡೆದು ನಂತರ ಕಚೇರಿಗೆ ಬಂದು ಚಾಸಾ-1 ರವರು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ವಿಷಯದ ಕುರಿತು ಚಾಸಾ-7 ರವರಿಗೆ ಹೇಳಿಕೆ ನೀಡಿರುತ್ತೆನೆ.

ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ ನಾವು ದಸ್ತಗಿರಿ ಮಾಡಿದ ಆರೋಪಿಯಾಗಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನನಗೆ ಸಂಜೆ 7-15 ಕ್ಕೆ ಚಾಸಾ-1 ರವರು ದಾಳಿ ಕುರಿತು ಹೇಳಿದರು. ಆಗ ನಾನು ಗೋಕಾಕ ಅಬಕಾರಿ ಕಚೇರಿಯಲ್ಲಿದ್ದೆನು. ಆಗ ಚಾಸಾ-1 ರವರೂ ಸಹ ಕಚೇರಿಯಲ್ಲಿದ್ದರು. ಸದರಿ ದಿನದಂದು ಚಾಸಾ-1 ರವರು ಕಚೇರಿಗೆ ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಬಾತ್ಮಿ ಬಂದಾಗ ಚಾಸಾ-1 ರವರು ಕಚೇರಿಯಲ್ಲಿದ್ದರು. ನಾವು ಕಚೇರಿಯಿಂದ ಸಂಜೆ 7-20 ಕ್ಕೆ ಹೊರಟೆವು. ಅಲ್ಲಿಂದ ಮಾಲದಿನ್ನಿ ಕ್ರಾಸಗೆ ಹೋದೆವು. ಚುನಾವಣೆ ನಿಮಿತ್ಯ 10 ನಿಮಿಷ ಗಸ್ತು ಕಾರ್ಯ ಮಾಡಿದೆವು. ಸದರಿ 10 ನಿಮಿಷಗಳಲ್ಲಿ ಮಾಲದಿನ್ನಿ ಕ್ರಾಸ ಹತ್ತಿರ ಗಸ್ತು ಮಾಡಿದೆವು. ಆಗ ಸುಮಾರು 7-30 ಗಂಟೆಯಾಗಿತ್ತು. ನಾವು ತೆಗೆದುಕೊಂಡ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ನೆನಪಿರುವುದಿಲ್ಲ. ಪಂಚರನ್ನು ಚಾಸಾ-1 ರವರು ಕರೆದುಕೊಂಡು ಬಂದರು.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾನು ಮತ್ತು ಚಾಸಾ-1 ರವರು ಇದ್ದೆವು. ಬೆಣಚಿನಮರಡಿ ಗ್ರಾಮ ಸುಮಾರು 8 ರಿಂದ 9 ಸಾವಿರ ಜನಸಂಖ್ಯೆ ಇರುವ ಊರು ಎಂದರೆ ನನಗೆ ಗೊತ್ತಿಲ್ಲ. ಕಿರಾಣಿ ಅಂಗಡಿಯ ನಂಬರ ಹೇಳಲು ಬರುವುದಿಲ್ಲ. ಅದರ ಅಕ್ಕಪಕ್ಕದಲ್ಲಿ ಏನಿದೆ ಎಂದು ಹೇಳಲು ಬರುವುದಿಲ್ಲ. ನಾವು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ನ್ಯಾಯಾಲಯದಲ್ಲಿ ಮೊದಲನೇ ಬಾರಿ ನೋಡುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತನು ತವಗ ಗ್ರಾಮದಲ್ಲಿ ಒಕ್ಕಲುತನ ಮಾಡುತ್ತಾನೆ ಎಂದರೆ ಸರಿಯಲ್ಲ. ಸದರಿ ಕಿರಾಣಿ ಅಂಗಡಿಯ ಫೋಟೋ ತೆಗೆದಿರುವುದಿಲ್ಲ. ಸದರಿ ಅಂಗಡಿಯಲ್ಲಿ ಇಟ್ಟಿರುವ ಬೇರೆ ಕಿರಾಣಿ ಸಮಾನುಗಳ ಬಗ್ಗೆ ಗಮನ ಕೊಟ್ಟಿರುವುದಿಲ್ಲ. ಘಟನಾ ಸ್ಥಳದಲ್ಲಿ ಕಿರಾಣಿ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಿನ ಅಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದ ಮುದ್ದೆಮಾಲನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ.
ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.